ಆ ಹೌದು

ಇ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಪ್ರಾರಂಭಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಇದರ ಅವಶ್ಯಕತೆಯನ್ನು ನಿಯಮಾನುಸಾರ ಪರಿಶೀಲಿಸಲಾಗುವುದು.

ವಿಷಯ:- ವಿಶ್ವ ಯೋಜನೆಯಲ್ಲಿ ವಕ್ಕುಂದ್ ಗ್ರಾಮದಲ್ಲಿ ದೊರೆಯುವ ಕೆಂಪು ಕಲ್ಲುಗಳಿಂದ (ಕ್ಯಾವಿ) ಡಿಸ್ಪೆಂಪರ್ ಅಥವಾ ಆಯಿಲ್ ಬಾಂಡ್ ಡಿಸ್ಪೆಂಪರ್ ತಯಾರಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1588 (2339)

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಬೆಳಗಾಂ ಜಿಲ್ಲೆ ಬೈಲಹೊಂಗಲ ವಕ್ಕುಂದ ಗ್ರಾಮದಲ್ಲಿ ಕೆಂಪು ಕಲ್ಲು ಹೆಚ್ಚಾಗಿದ್ದು (ಕ್ಯಾವಿ) ಈ ಕಲ್ಲಿನಿಂದ ಡಿಸ್ಪೆಂಪರ್ ಅಥವಾ ಆಯಿಲ್ ಬಾಂಡ್ ಡಿಸ್ಪೆಂಪರ್‌ನ್ನು ಮಾಡಲು ಅನುಕೂಲವಾದ ಸ್ಥಳ ಇರುವುದೆಂದು ಗಮನಕ್ಕೆ ಬಂದಿದೆಯೇ ?

ಆ ಹಾಗಿದ್ದಲ್ಲಿ ವಿಶ್ವ ಯೋಜನೆಯಲ್ಲಿ ಅಥವಾ ಬೇರೆ ಯೋವುದೇ ಯೋಜನೆಯ ಅಡಿಯಲ್ಲಿ ಅಲ್ಲಿ ದೊರೆಯುವ ಕೆಂಪು ಕಲ್ಲಿನಿಂದ ಡಿಸ್ಪಂಪರ್ ಕಾರ್ಖಾನೆ ಅಥವಾ ಆಯಿಲ್ ಬಾಂಡ್ ಡಿಸ್ಪಂಪರ್ ಕಾರ್ಖಾನೆಯನ್ನು ತೆರೆಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಇ ಈ ಕೆಲಸಕ್ಕೆ ಸರ್ಕಾರದವರು ಕೂಡಲೇ ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶ ನೀಡುವರೆ ?

ಈ ಆ ಕೆಲಸಕ್ಕೆ ಎಷ್ಟು ಹಣ ಬೇಕಾಗುವುದು ಹಾಗೂ ಆದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ದೊರೆಯುವುದು ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ ಬೆಳಗಾವಿ ಜಿಲ್ಲೆಯ ವಕ್ಕುಂದ ಗ್ರಾಮದಲ್ಲಿ ಕೆಂಪುಕಲ್ಲು ದೊರೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ ಇಲ್ಲಿ ದೊರೆಯುತ್ತಿರುವ ಕೆಂಪು ಕಲ್ಲಿನಿಂದ ಯಾವುದೇ ರೀತಿಯ ಡಿಸ್ಪೆಂಪರ್ ತಯಾರಿಸಲು ಬರುವುದಿಲ್ಲ.

ಇ ಅನ್ವಯಿಸುವುದಿಲ್ಲ.

ಈ ಅನ್ವಯಿಸುವುದಿಲ್ಲ.

ಛೇರ್‌ಮನ್ :- ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

2.ವರದಿಯನ್ನೊಪ್ಪಿಸುವುದು.

ಶ್ರೀ ಎಂ.ಶ್ರೀನಿವಾಸಯ್ಯ :- ಮಾನ್ಯ ಉಪಾಧ್ಯಕ್ಷಿಣಿಯವರೇ, ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರ ಪರವಾಗಿ ಖಾಸಗಿ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಿಸಿದ ಸಮಿತಿಯ 5ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಪೆರಿಕಲ್.ಎಂ.ಮಲ್ಲಪ್ಪ :- (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ):- ಮಾನ್ಯ ಉಪಾಧ್ಯಕ್ಷರೇ, 1975ನೇ ಸಾಲಿನ ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಹಾಗೂ ನಿಯಂತ್ರಣ) ಅಧಿನಿಯಮದ ಮೇರೆಗೆ ನಿಯಮಾವಳಿಗಳನ್ನು ರಚಿಸಲು ಉಂಟಾಗಿರುವ ಅಗಾಧವಾದ ವಿಳಂಬಕ್ಕೆ ಸಂಬಂಧಿಸಿದ 17ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.